ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಕೊನೆಯ ದಿವಸ. ಈ ರೀತಿ ಹೊಸ ಬಿಲ್‌ನ್ನು ತರುವಂಥದ್ದನ್ನು ಖಂಡಿಸುತ್ತಿದ್ದೇವೆ. ಈ ರೀತಿ ಹೊಸ ಬಿಲ್‌ನ್ನು ಕೊನೆಯ ದಿವಸ ತರುವುದು ಸರಿಯಲ್ಲ. ಬಿ.ಎ.ಸಿ. ಮೀಟಿಂಗ್‌ನಲ್ಲಿ ನಿರ್ಣಯವಾಗಿರುವ ಪ್ರಕಾರ ನಾನು ಇದನ್ನು ವಿರೋಧಿಸುತ್ತಿದ್ದೇನೆ. ಕೊನೆಯ ದಿವಸ ಈ ರೀತಿ ಬಿಲ್ ತರುವುದು ಸರಿಯಲ್ಲ. ಇದೊಂದು ಕೆಟ್ಟ ಪರಂಪರೆ. ಇದು ನಿಮಗೆ ಗೊತ್ತಿಲ್ಲವೆ. ಈ ರೀತಿ ಕೊನೆಯ ದಿವಸ ಬಿಲ್ ತಂದಿರುವುದನ್ನು ನಾನು ಖಂಡಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ಬಿಲ್ ಮಂಡನೆಗೆ ತಾವು ಅವಕಾಶ ಕೊಡಬೇಡಿ.

2. ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕ, 2015

ಶ್ರೀ ಬಾಬುರಾವ್ ಚಿಂಚನಸೂರು (ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕವನ್ನು ಮಂಡಿಸಲು ಅನುಮತಿ ಯನ್ನು ಕೋರುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2015ನೇ ಸಾಲಿನ ಕರ್ನಾಟಕ ಜಲ ಸಾರಿಗೆ ಮಂಡಳಿ ವಿದೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

(ವಿಧೇಯಕವನ್ನು ಮಂಡಿಸಲಾಯಿತು)

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಜಲಸಾರಿಗೆ ಮಂಡಳಿ, ವಿಧೇಯಕ, 2015

ಶ್ರೀ ಬಾಬುರಾವ್ ಚಿಂಚನಸೂರು (ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, 2015ನೇ ಸಾಲಿನ ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎನ್ನುವ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆಯೆಂದು ಭಾವಿಸುತ್ತೇನೆ.

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವವು ಹೌದು ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ